ದೊಡ್ಡವರಾಗಿ ತನ್ನ ಮಾತಿಗೆ ಎದುರುತ್ತರ ಕೊಟ್ಟು, ಜೋರಾಗಿ ಮಾತನಾಡಿದರೂ ಕೇಳಿಕೊಂಡು ಸುಮ್ಮನಿರಬೇಕಾಗುತ್ತದೆ. ಮತ್ತೊಂದೆಡೆ ಪತಿಯ ದೌರ್ಜನ್ಯವನ್ನೂ ಸಹಿಸಬೇಕಾಗುತ್ತದೆ. ಮನೆಯಲ್ಲಿ ಸ್ವಲ್ಪವಾದರೂ 'ಶಾಂತಿ' ಇರಬೇಕಾದರೆ ಎಲ್ಲ ಬಗೆಯ ಅಪಮಾನ, ಶೋಷಣೆ, ಕಷ್ಟಗಳನ್ನೂ ಸಹಿಸಿಕೊಂಡು, ಸುಧಾರಿಸಿಕೊಂಡು ಹೋಗಬೇಕಾಗುತ್ತದೆ. ಕಟ್ಟಕಡೆಯವರೆಗೂ ಆಕೆಯ ವೈಯಕ್ತಿಕ ಭಾವನೆಗಳಿಗೆ ಯಾರೂ ಸ್ಪಂದಿಸದಾಗ ಆಕೆಯ ಮನಃಸ್ಥಿತಿ ಕೆಡುವ ಸಂದರ್ಭ ಬರಬಹುದು ಅಥವಾ ಆಕೆ ಖಿನ್ನತೆಯ ಸ್ಥಿತಿ ತಲುಪಬಹುದು. ಇದಕ್ಕೆಲ್ಲಾ ಪರಿಹಾರ ಒಂದೇ. ಒಬ್ಬರನ್ನೊಬ್ಬರು ಗೌರವಿಸಿ, ಅರಿತು ನಡೆಯುವುದು. ಆಗ ಮಾತ್ರ ಸಂಸಾರದಲ್ಲಿ ಶಾಂತಿ ಇರುತ್ತದೆ.

ಮಹಿಳೆ ಮಾಡುವ ಕೆಲಸವನ್ನು ಎರಡು ರೀತಿಯಾಗಿ ವಿಭಾಗಿಸಬಹುದು. ೧. ಉತ್ಪನ್ನ ಇಲ್ಲದಿರುವ ಅಂದರೆ ವರಮಾನವಿರದ ಕೆಲಸಗಳು. ಉದಾಹರಣೆಗೆ ಆಕೆ ತನ್ನ ಮನೆಯಲ್ಲಿ ಮಾಡುವ ಅಡುಗೆ ಕೆಲಸ, ಪಾತ್ರೆ ಬಟ್ಟೆ ತೊಳೆಯುವುದು, ದೂರದ ಕೊಳವೆಬಾವಿಯಿಂದ ನೀರು ತರುವುದು, ಹಸುವಿನ ಹಾಲು ಕರೆಯುವುದು ಇತ್ಯಾದಿ. ೨. ಆದಾಯ ಇರುವ ಅಂದರೆ, ಮನೆಯಿಂದ ಹೊರಗೆ ಹೋಗಿ ಆಫೀಸು, ಕಾರ್ಖಾನೆಗಳಲ್ಲಿ ದುಡಿದು, ವರಮಾನ ತರುವ ಕೆಲಸ.

ಮೊದಲಿನ ವರ್ಗದ, ಅಂದರೆ ವರಮಾನ ಸಿಗದ ಮನೆಗೆಲಸಕ್ಕೆ ಆಳುಗಳನ್ನು ಇಟ್ಟರೆ, ಅವರಿಗೆ ಕೂಲಿ ಕೊಡಬೇಕಾಗುತ್ತದೆ. ಆಗ ಅದು, ಆ ಆಳುಗಳಿಗೆ, ಆದಾಯ ಕೊಡುವ ಕೆಲಸವಾಗುತ್ತದೆ. ಅದೇ ಕೆಲಸ, ಮನೆಯೊಡತಿ ಮಾಡಿದಾಗ ಅದು ಆಕೆಯ ಕರ್ತವ್ಯವಾಗಿಬಿಡುತ್ತದೆ! ಆ ಕೆಲಸಗಳನ್ನು ಅವಳ ಹೊರತು ಮನೆಯ ಇತರ ಸದಸ್ಯರು (ಪತಿಯೂ ಸೇರಿ) ತಮ್ಮ ಕೆಲಸ ಅಲ್ಲ ಎಂದೇ ಭಾವಿಸುತ್ತಾರೆ. ಆಕೆಯೇ ಮಾಡಬೇಕು. ಅದು ಅವಳ ಕರ್ತವ್ಯ! ಹೌದು, ಕುಟುಂಬ ನಿರ್ವಹಣೆಗಾಗಿ ಆಕೆ ಅವುಗಳನ್ನು ಮಾಡಲೇಬೇಕು. ಅವಳು ಮಾಡುವ ಮನೆಗೆಲಸ ದುಡಿಮೆ ಅಲ್ಲ, ಆ ಕೆಲಸ ಆಕೆ ಮಾಡದಿದ್ದರೆ ಮನೆ ನಡೆಯುವುದಿಲ್ಲ. 'ಕೌಟುಂಬಿಕ ಜವಾಬ್ದಾರಿ ಮಹಿಳೆಯರದೇ' ಎನ್ನುತ್ತದೆ ಪುರುಷ ಪಕ್ಷಪಾತಿ ಸಮಾಜ. ಆದರೆ ಗೃಹಿಣಿಯ ದುಡಿಮೆಗೆ ಚಿಕ್ಕಾಸೂ ಬೆಲೆ ಕೊಡುವುದಿಲ್ಲ. ಆರ್ಥಿಕತಜ್ಞರ ಪ್ರಕಾರ ಒಬ್ಬ ಮಹಿಳೆ ಮನೆಯಿಂದ ಹೊರಗೆ ಹೋಗಿ ದುಡಿಯುವುದು ಮತ್ತು ಆಕೆ, ಮನೆಯ ಜವಾಬ್ದಾರಿ ತೆಗೆದುಕೊಂಡು ತನ್ನ ಸಂಸಾರಕ್ಕಾಗಿ ಮಾಡುವ ದುಡಿತ – ಇವೆರಡನ್ನೂ ಪರಿಗಣನೆಗೆ ತೆಗೆದುಕೊಳ್ಳಬೇಕು. ಅಂದರೆ ಮನೆಗೆಲಸಕ್ಕೂ ಬೆಲೆ ಕಟ್ಟಬೇಕು ಎನ್ನುತ್ತಾರೆ ಅವರು.

ಪುರುಷಪಕ್ಷಪಾತಿಯಾದ ನಮ್ಮ ಸಮಾಜ ಮನೆಗೆಲಸದ ಜವಾಬ್ದಾರಿ ಮಹಿಳೆಯದೆಂದೇ ಹೇಳುತ್ತದೆ. ಮನೆಯ ಜವಾಬ್ದಾರಿಯನ್ನು ಪುರುಷ ಕೂಡ ಹಂಚಿಕೊಂಡರೆ ಮಹಿಳೆಯ ಭಾರ ಎಷ್ಟೋ ಕಡಿಮೆಯಾಗುತ್ತದೆ. ಹಲವು ಕಾರಣಗಳಿಂದ ಮಹಿಳೆ ಹೊರಗೆ ಹೋಗಿ ದುಡಿಯಬೇಕಾಗುತ್ತದೆ. ಕೆಲವರು ಹಣದ ಅಗತ್ಯ ಇರುವುದರಿಂದ, ಇನ್ನು ಕೆಲವರು ಮನೆಯಲ್ಲಿ 'ಬೋರ್' ಆಗುತ್ತದೆಂದು ಕೆಲಸಕ್ಕೆ ಹೋಗುತ್ತಾರೆ. ಪ್ರತಿಯೊಬ್ಬರಿಗೂ ತಾವು ದುಡಿಯುವ ಸ್ಥಳಗಳಲ್ಲಿ ತಮ್ಮದೇ ಆದ ಸಮಸ್ಯೆಗಳು, ಒತ್ತಡಗಳು ಇರುತ್ತವೆ. ಇನ್ನು ಮನೆಗೆ ಬಂದಾಗ, ಮಕ್ಕಳ ಆಸಕ್ತಿಗಳು, ಬೇಡಿಕೆಗಳು, ಮನೆಗೆಲಸ, ಗಂಡನ ಅಗತ್ಯಗಳ ಪೂರೈಕೆ, ಹೋಂವರ್ಕ್, ಶಾಲಾ ಪರೀಕ್ಷೆಗಳು, ಶಾಲೆಗೆ ಸೇರಿಸುವುದು – ಎಲ್ಲವನ್ನೂ ಆಕೆಯೇ ನಿಭಾಯಿಸಬೇಕು. ಮಕ್ಕಳು ಚಿಕ್ಕವರಿದ್ದರೆ ಅವರನ್ನು ಮನೆಯಲ್ಲಿ ಬಿಟ್ಟುಹೋಗುವ ಸಮಸ್ಯೆ ಬೇರೆ ಇರುತ್ತದೆ. ಅವಿಭಕ್ತ ಕುಟುಂಬದಲ್ಲಿ ಈ ಸಮಸ್ಯೆ ಸಾಮಾನ್ಯವಾಗಿ ಇರುವುದಿಲ್ಲ. ಇನ್ನು ಗಂಡನಾದವನು ತನ್ನ ಹೆಂಡತಿಯನ್ನು, "ಊಟಕ್ಕೆ ಹಾಕು", "ಕಾಫಿ ಕೊಡು", "ನೀರು ಕೊಡು" ಮುಂತಾಗಿ ಕಾಡುತ್ತಲೇ ಇರುತ್ತಾನೆ. ಆಕೆ ವಿದ್ಯಾವಂತಳಾಗಿರಲಿ, ಅವಿದ್ಯಾವಂತಳಾಗಿರಲಿ, ಪರಿಸ್ಥಿತಿ ಮಾತ್ರ ಹೀಗೆಯೇ ಇರುತ್ತದೆ. ಆದರೆ ಇಲ್ಲಿ ಒಂದು ವಿಷಯ. ಮನೆಗೆಲಸವನ್ನು ಪ್ರೀತಿಯಿಂದ ಮಾಡುವುದಕ್ಕೂ, ಒತ್ತಾಯದಿಂದ ಮಾಡಿಸಿಕೊಳ್ಳುವುದಕ್ಕೂ ಬಹಳ ವ್ಯತ್ಯಾಸ ಇದೆ. ಒತ್ತಾಯದಿಂದ ಮಾಡುವ ಕೆಲಸವಾವುದೂ ತೃಪ್ತಿಯನ್ನು ತರುವುದಿಲ್ಲ.

ಕೆಲವೇ ಕೆಲವು ಮನೆಗಳಲ್ಲಿ ಗಂಡಸು, ತನ್ನ ಪತ್ನಿ ಮಾಡುವ ಮನೆಗೆಲಸಗಳಲ್ಲಿ ಸಹಭಾಗಿಯಾಗಿರುತ್ತಾನೆ. ಇದು ಗಂಡುಕೆಲಸ, ಇದು ಹೆಣ್ಣುಕೆಲಸ ಎಂಬ ಭೇದ ಮಾಡುವುದಿಲ್ಲ. ಹಿಂದಿನ ಅವಿಭಕ್ತ ಕುಟುಂಬದಲ್ಲಿ ಮಕ್ಕಳ ಆರೈಕೆ ಇತ್ಯಾದಿ ಎಲ್ಲರ ಹೊಣೆಯಾಗಿತ್ತು. ಈಗ ಹಾಗಿಲ್ಲ. ಬಹು ಚಿಕ್ಕ ಸಂಸಾರ. ಚಿಕ್ಕ ಮಕ್ಕಳನ್ನು ಶಿಶುಪಾಲನಾ ಕೇಂದ್ರಗಳಲ್ಲಿ ಬಿಟ್ಟು, ಕೆಲಸಕ್ಕೆ ಹೋಗಬೇಕು. ತಾಯಿಯಾದವಳು ತನ್ನ ವೈಯಕ್ತಿಕ ಸಮಯವನ್ನು, ಬಿಡುವಿನ ಸಮಯವನ್ನು ಇತರರಿಗೆ

ಮೀಸಲಾಗಿಡುವುದು ಕೂಡ ಆಕೆಯ ಕರ್ತವ್ಯದೊಳಗೇ ಸೇರಿಕೊಳ್ಳುತ್ತದೆ. ಹೊರಗೆ ದುಡಿಯುವ ಗಂಡು, ತನ್ನ ವಿರಾಮದ ವೇಳೆಯನ್ನು ಮನೆಯಿಂದ ಹೊರಗೆ ಇದ್ದು, ಗೆಳೆಯರ ಜೊತೆ, ಇತರ ಹವ್ಯಾಸಗಳಲ್ಲಿ ಕಳೆಯುತ್ತಾನೆ. ಆದರೆ ಮಹಿಳೆ ತನ್ನ 'ಆಸಕ್ತಿ' ಗಳನ್ನು ಬದಿಗೊತ್ತಿ ಅಥವಾ ಮುಂದಕ್ಕೆ ಹಾಕಿ, ಮನೆಗೆಲಸದಲ್ಲಿ ತೊಡಗುತ್ತಾಳೆ. ತನ್ನ ಕೆಲಸದ ಮಧ್ಯೆ ಬಿಡುವು ಮಾಡಿಕೊಂಡು, ನೆರೆಹೊರೆಯವರೊಡನೆ ಸ್ವಲ್ಪ ಹೊತ್ತು ಮಾತಾಡುವುದೇ ಆಕೆಗೆ ದೊರೆಯುವ ವಿರಾಮ. ಆದರೆ ತನ್ನ ದುರಭ್ಯಾಸಗಳಲ್ಲಿ ಕಾಲಹರಣ ಮಾಡುವ ಪತಿ, ತನ್ನ ಮಡದಿ ಕೆಲಸ ಬಿಟ್ಟು, ನೆರೆಹೊರೆಯ ಮಹಿಳೆಯರೊಡನೆ ಹರಟೆ ಹೊಡೆಯುತ್ತಾಳೆ ಎಂದು ದೂರುತ್ತಾನೆ. ಎಂಥ ವಿಪರ್ಯಾಸ!

ಕುಟುಂಬದಲ್ಲಿ ಪತಿಪತ್ನಿಯರಿಬ್ಬರೂ ಜವಾಬ್ದಾರಿಯನ್ನು ಹಂಚಿಕೊಂಡರೆ, ಜೊತೆಯಲ್ಲಿ ಕುಳಿತು ತಮ್ಮ ಕುಟುಂಬದ ಸಮಸ್ಯೆಗಳನ್ನು ಚರ್ಚಿಸಿ ಪರಿಹಾರ ಹುಡುಕಿದರೆ, ಸಮಸ್ಯೆಗಳು ಏಳುವುದಿಲ್ಲ. ಬದಲಾಗಿ ಮಕ್ಕಳ ಮುಂದೆ ಹಾವು–ಮುಂಗುಸಿಯಂತೆ ಜಗಳವಾಡಿದಾಗ, ಆ ಮಕ್ಕಳೂ 'ಅದೇ ಸರಿ' ಎಂದು ಭಾವಿಸಿ, ಹಾಗೆಯೇ ಬೆಳೆಯುತ್ತಾರೆ. ತಂದೆತಾಯಿಗಳು ಬಳಸುವ ಕೆಟ್ಟ ಪದಗಳನ್ನು ತಾವೂ ಕಲಿಯುತ್ತಾರೆ. ಅವರ ರೀತಿನೀತಿಗಳನ್ನೇ ಅನುಸರಿಸುತ್ತಾರೆ. ತಂದೆಯಾದವನು, ತನ್ನ ಕರ್ತವ್ಯವನ್ನು ಅರಿತುಕೊಂಡು, ಮಕ್ಕಳ ಜವಾಬ್ದಾರಿಯನ್ನು ವಹಿಸಿಕೊಂಡಾಗ ಈ ಸಮಸ್ಯೆಗಳು ಇರುವುದಿಲ್ಲ. ಬದಲಾಗಿ, ಪತ್ನಿಯೇ ಮಕ್ಕಳ ಜವಾಬ್ದಾರಿಯನ್ನೆಲ್ಲ ತೆಗೆದುಕೊಳ್ಳಲಿ ಎಂದು ಹೇಳುವ ಗಂಡಸು, ಕೀಳರಿಮೆ ಮತ್ತು 'ಹಿಂಸಾನಂದ' ದಿಂದ ಕೂಡಿದವನು ಎಂದು ಹೇಳದೇ ವಿಧಿಯಿಲ್ಲ. ಮಹಿಳೆ ಪುರುಷನಿಗಿಂತ ಹೆಚ್ಚು ದುಡಿಯುತ್ತಾಳೆ. ಕೃಷಿಕರ ಮನೆಯಲ್ಲಿ ಹೆಣ್ಣುಮಕ್ಕಳು ಮನೆಗೆಲಸ ಮಾಡಿ, ಆಮೇಲೆ ಗದ್ದೆ ಕೆಲಸಕ್ಕೆ ಹೋಗುತ್ತಾರೆ. ಕಳೆ ತೆಗೆಯುವುದು, ನಾಟಿ ಕೆಲಸ, ಗೊಬ್ಬರ ಹಾಕುವುದು – ಎಲ್ಲ ಮಾಡುತ್ತಾರೆ. ಕೃಷಿಕೆಲಸದ ಅರ್ಧದಷ್ಟು ಇವರು ಮಾಡಿದರೂ, ಅದರ ಉತ್ಪಾದನೆಯಲ್ಲಿ ಕಿಂಚಿತ್ತಾದರೂ ಕೇಳುವ ಹಕ್ಕು ಇವರಿಗಿಲ್ಲ! ಯಾವ ವರ್ಗದ ಮನೆಯೇ ಆಗಿರಲಿ, ಹಣದ ವಿಷಯ ಬಂದರೆ ಜಗಳ ಆರಂಭವಾಗುತ್ತದೆ. "ತಾನು ದುಡಿಯುತ್ತಿದ್ದರೂ, ಮನೆಯಲ್ಲಿ ಶಾಂತಿ ಬೇಕಾದರೆ ಮಹಿಳೆ ಸುಮ್ಮನಿರಬೇಕು" ಎಂದು ಸಮಾಜ ನಿರ್ಬಂಧ ಹಾಕುತ್ತದೆ. ತನಗೆ ಅಭಿಮಾನ, ಪ್ರೀತಿ, ಗೌರವ ತೋರದವನ ಮೇಲೆ ಆಕೆಗೆ ಪ್ರೀತಿ ಎಲ್ಲಿಂದ ಬರಬೇಕು! ಅಂಥವರಿಗೆ ಹೆಂಡತಿ ಬೇಕಾಗಿಲ್ಲ. ದುಡಿಯುವ ಆಳು ಬೇಕು!

ತಾಯಿಯಾದವಳು, ಮನೆಯಲ್ಲಿ ಮಕ್ಕಳಿಗೆ ಚಿಕ್ಕಂದಿನಲ್ಲೇ ಮನೆಯ ಜವಾಬ್ದಾರಿಯ ಬಗ್ಗೆ ತಿಳಿಸಿಕೊಡಬೇಕು. ಹೆಣ್ಣು, ಗಂಡು ಎಂದು ಭೇದ ಮಾಡದೇ, ಎಲ್ಲರೂ ಸಮಾನರು ಎಂಬ ಅರಿವನ್ನು ಮೂಡಿಸಬೇಕು. ಗಂಡುಮಕ್ಕಳಿಗೂ ಮನೆಗೆಲಸ ಕಲಿಸಬೇಕು. ಕೆಲಸದಲ್ಲಿ ಹೆಣ್ಣುಮಕ್ಕಳ ಕೆಲಸ, ಗಂಡುಮಕ್ಕಳ ಕೆಲಸ ಎಂಬ ಭೇದ ಮಾಡಬಾರದು. ತಂದೆತಾಯಿಗಳ ಮಧ್ಯೆ ಗೌರವಾನ್ವಿತ ತಿಳಿವಳಿಕೆ ಇದ್ದಾಗ, ಮಕ್ಕಳು ಸರಿದಾರಿಯಲ್ಲಿ ನಡೆದು, ಆ ಕುಟುಂಬದೊಡನೆ ಸಮಾಜವೂ ಶಾಂತಿಯಿಂದ ಅಭಿವೃದ್ಧಿ ಪಥದಲ್ಲಿ ನಡೆಯಲು ಸಾಧ್ಯವಾಗುತ್ತದೆ.

ಬರೀ ಹಣದ ಹಿಂದೆ ಬಿದ್ದು, ಅತ್ಯಾಧುನಿಕ ಐಷಾರಾಮದ ಸೌಲಭ್ಯಗಳನ್ನು ಮಕ್ಕಳಿಗೆ ಕೊಡುತ್ತ ಹೋಗುವುದು ಬರೀ ತೋರಿಕೆಯ ಪ್ರೀತಿಯಾಗುತ್ತದೆ. ತಂದೆತಾಯಿಗಳು ತಮ್ಮಲ್ಲೂ, ಮಕ್ಕಳಲ್ಲೂ, ಸ್ವಲ್ಪವಾದರೂ ಆಧ್ಯಾತ್ಮಿಕ ಮನೋಭಾವವನ್ನು ಬೆಳೆಸಿದರೆ, ಸಮಸ್ಯೆಗಳು ಬೃಹದಾಕಾರವಾಗಿ ಬೆಳೆಯುವುದಿಲ್ಲ. ಆಧ್ಯಾತ್ಮಿಕ ಮನೋಭಾವ ಇಲ್ಲದ ವ್ಯಕ್ತಿಯ ಬಾಯಿಯಲ್ಲಿ ಯಾವಾಗಲೂ Tension (ಮಾನಸಿಕ ಒತ್ತಡ) ಎಂಬ ಪದ ಕೇಳಿ ಬರುತ್ತಿರುತ್ತದೆ. ಅದಕ್ಕೆ ಪರಿಹಾರವನ್ನು ಆತ ಹುಡುಕಲಾರ. ಅದಕ್ಕೆ ಬದಲಾಗಿ ಅವನು ಇತರರಿಗೆ Tension ಹಂಚುತ್ತಾನೆ. ಆದರೆ ಮಕ್ಕಳಿಗೆ ಸಣ್ಣಂದಿನಲ್ಲೇ ಸರಿಯಾದ ಮಾರ್ಗದರ್ಶನ ಕೊಟ್ಟಾಗ, ಅವರು ಸ್ವಲ್ಪಮಟ್ಟಿಗಾದರೂ ಸಮತೋಲನ ವ್ಯಕ್ತಿತ್ವ ಇರುವ ಪ್ರಜೆಗಳಾಗುತ್ತಾರೆ. ಇಂತಹ ಪ್ರಜೆಗಳನ್ನು ಸೃಷ್ಟಿಸುವಲ್ಲಿ ಕುಟುಂಬದ ಪಾತ್ರ ದೊಡ್ಡದು. ಅದರಲ್ಲೂ ಮಹಿಳೆಯ ಪಾತ್ರ ಹಿರಿದು. ಸಮತೋಲನ ವ್ಯಕ್ತಿತ್ವ ಇರುವ, ದೇಶಭಕ್ತ ಪ್ರಜೆಗಳಿದ್ದರೆ ದೇಶ ಉಳಿಯುತ್ತದೆ. ಇಂತಹ ಪ್ರಜೆಗಳನ್ನು ತಾಯಿಯಾದವಳು ಮಾತ್ರ ಸಮಾಜಕ್ಕೆ ಕೊಡುಗೆಯಾಗಿ ನೀಡಬಲ್ಲಳು. ಆದುದರಿಂದ ತನ್ನ ದೇಶವನ್ನು ಉಳಿಸಲಿಕ್ಕಾಗಿಯಾದರೂ, ಮಹಿಳೆ ತನ್ನ ಕೆಲವು ಅಗತ್ಯಗಳನ್ನು ತ್ಯಾಗಮಾಡಿ, ಮಕ್ಕಳು ಉತ್ತಮ ಪ್ರಜೆಗಳಾಗುವಂತೆ ಸಂಸಾರದ ಭಾರವನ್ನು ಹೊರಬೇಕಾಗುತ್ತದೆ. ಹೀಗೆ ಕುಟುಂಬ ನಿರ್ವಹಣೆಯಲ್ಲಿ ಮಹಿಳೆ ಅತಿ ದೊಡ್ಡ ಜವಾಬ್ದಾರಿಯನ್ನು ವಹಿಸಬೇಕಾಗುತ್ತದೆ. ಹೀಗೆ ಮನೆಯ ಒಳಗೆ, ಹೊರಗೆ ಎಲ್ಲಾ ಕಡೆಯೂ ಗುರುತರ ಭಾರವನ್ನು ಹೊರುತ್ತಿರುವ, ದುಡಿಯುವ ಮಹಿಳೆಯ ಭಾರವನ್ನು ಸಮಾಜ ಕಡಮೆ ಮಾಡುವುದೇ? •

# ಸಮರಸವಾಗಲಿ ಸಂಸಾರ

ಡಾ. ಕೆ. ಜಗದೀಶ ಪೈ



**ಭಾ**ರತೀಯ ಕುಟುಂಬ ಪದ್ಧತಿ ಜಗತ್ತಿನಲ್ಲಿಯೇ ಶ್ರೇಷ್ಠವಾದದ್ದು ಎಂಬುದಾಗಿ ಇಂದು ಪಾಶ್ಚಾತ್ಯ ಚಿಂತಕರು ಹೇಳುತ್ತಾರೆ. ಪಾಶ್ಚಾತ್ಯರು ಭಾರತದ ಕುಟುಂಬ ಪದ್ಧತಿ ಸರಾಗವಾಗಿ, ದೀರ್ಘ ಕಾಲ ನಡೆದುಕೊಂಡು ಬಂದದ್ದನ್ನು ನೋಡಿ ಆಶ್ಚರ್ಯ ಮತ್ತು ಅಭಿಮಾನಗಳನ್ನು ವ್ಯಕ್ತಪಡಿಸಿದ್ದಾರೆ. 'ಉತ್ತಮ ಕುಟುಂಬ ಪದ್ಧತಿ' ಎಂಬುದು ಜಗತ್ತಿಗೆ ಭಾರತದ ಕೊಡುಗೆಯೆಂದರೆ ಅತಿಶಯೋಕ್ತಿಯಾಗಲಾರದು.

ಈ ದೇಶದಲ್ಲಿ ಸನಾತನ ಸಂಸ್ಕೃತಿ ಉಳಿದದ್ದು ಹೌದಾದರೆ ಅದು ನಮ್ಮ ಕುಟುಂಬ ಪದ್ಧತಿಯಿಂದ. ಕುಟುಂಬ ಪದ್ಧತಿಯಲ್ಲಿ ಶಿಥಿಲತೆ ಕಂಡುಬಂದಾಗ ನಮ್ಮ ಸಮಾಜದಲ್ಲಿ, ಸಂಸ್ಕೃತಿಯಲ್ಲಿ ವಿಕೃತಿ, ಅವ್ಯವಸ್ಥೆ ಕಂಡುಬರುತ್ತದೆ. ಕುಟುಂಬ ಎಂಬುದು ಸಮಾಜದ ಒಂದು ಸಣ್ಣ ಘಟಕ. ಇಂತಹ ಸಣ್ಣ ಸಣ್ಣ ಘಟಕಗಳು ಸೇರಿಯೇ ವಿಶಾಲ ಸಮಾಜ ಈ ದೇಶದಲ್ಲಿ ನಿರ್ಮಾಣವಾಗಿದೆ. ಆದ್ದರಿಂದ ಕುಟುಂಬದ ಸಾಮರಸ್ಯವೇ ಸಮಾಜದ ಸುವ್ಯವಸ್ಥೆಗೆ ಬುನಾದಿ.

ಅಮೇರಿಕ ದೇಶದ ಸಮಾಜಶಾಸ್ತ್ರಜ್ಞನೊಬ್ಬ, "ಮುಂದಿನ ಇನ್ನೂರು ವರ್ಷಗಳಲ್ಲಿ ಅಮೆರಿಕ ಭಾರತವಾಗುತ್ತದೆ" ಎಂಬುದಾಗಿ ಭವಿಷ್ಯ ನುಡಿದಿದ್ದಾನೆ. ಅದಕ್ಕೆ ಅವನು ಕಾರಣವನ್ನು ಹೀಗೆ ನೀಡುತ್ತಾನೆ: "ಅಮೆರಿಕದಲ್ಲಿ ನೆಲೆಸಿರುವ ಬೇರೆ ಬೇರೆ ದೇಶಗಳ ಯಾವ ಜನರಲ್ಲೂ, ಯಾವ ಜನಾಂಗದಲ್ಲೂ ಕುಟುಂಬ ವ್ಯವಸ್ಥೆ ಅಷ್ಟೊಂದು ಗಟ್ಟಿಯಾಗಿಲ್ಲ. ಆದರೆ ಭಾರತದಿಂದ ಬಂದ ಹಿಂದೂಗಳ ಕುಟುಂಬ ವ್ಯವಸ್ಥೆ ಬಹಳ ಪ್ರಬಲವಾಗಿದೆ, ಭದ್ರವಾಗಿದೆ. ಆದ್ದರಿಂದ ಇನ್ನೂರು ವರ್ಷಗಳಲ್ಲಿ ಇವರೇ ಅಮೆರಿಕದ ನಿಜವಾದ ಪ್ರಜೆಗಳಾಗಿ ಅಮೇರಿಕವನ್ನು ಆಳುತ್ತಾರೆ."

ನಮ್ಮ ದೇಶದಲ್ಲಿ ಕುಟುಂಬಜೀವನಕ್ಕೆ ಬಹಳ ಮಹತ್ವ ಕೊಡಲಾಗಿದೆ. ಹಿಂದೂ ಧರ್ಮದಲ್ಲಿ ನಾಲ್ಕು ಆಶ್ರಮಗಳನ್ನು ಹೇಳಿದ್ದಾರಷ್ಟೆ; ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸಂನ್ಯಾಸ, – ಈ ನಾಲ್ಕು ಆಶ್ರಮಗಳಲ್ಲಿ ಶ್ರೇಷ್ಠವಾದದ್ದು ಗೃಹಸ್ಥಾಶ್ರಮ; **'ಧನ್ಯೋ ಗೃಹಸ್ಥಾಶ್ರಮಃ'** – ಗೃಹಸ್ಥಾಶ್ರಮವು ಧನ್ಯವಾದದು ಏಕೆಂದರೆ ಎಲ್ಲ ಆಶ್ರಮಗಳಿಗೂ ಆಧಾರವಾಗಿರುವುದು ಗೃಹಸ್ಥಾಶ್ರಮವೇ.

ನಮ್ಮ ದೇಶದಲ್ಲಿ ಮದುವೆ ಎಂಬುದು ಗಂಡು ಮತ್ತು ಹೆಣ್ಣುಗಳ ಒಟ್ಟುಗೂಡುವಿಕೆಗೆ ಒಂದು ಅನುಮತಿಯ ವ್ಯವಸ್ಥೆಯಷ್ಟೇ ಅಲ್ಲ. ಬದಲಾಗಿ ಅದು ಷೋಡಶ ಸಂಸ್ಕಾರಗಳಲ್ಲಿ ಒಂದು. **ಧರ್ಮೇ ಚ ಅರ್ಥೇ ಚ ಕಾಮೇ ಚ ನಾತಿಚರಿತವ್ಯಾ** ಅಂದರೆ ಧರ್ಮ, ಅರ್ಥ, ಕಾಮಗಳಲ್ಲಿ ಗಂಡು–ಹೆಣ್ಣು ಇಬ್ಬರೂ ಅತಿಕ್ರಮಿಸಿ ಹೋಗಬಾರದು ಎಂಬ ಆಗ್ರಹ 'ಮದುವೆ' ಎಂಬ ಸಂಸ್ಕಾರದಲ್ಲಿದೆ. ಮದುವೆಯ ಸಮಯದಲ್ಲಿ, **'ಏಕಮಿಷೇ ವಿಷ್ಣುಸ್ತ್ವಾನ್ವೇತು...'** ಮುಂತಾದ ಮಂತ್ರಗಳನ್ನು ಹೇಳಿಕೊಂಡು ಏಳು ಹೆಜ್ಜೆಗಳನ್ನು ಒಟ್ಟಿಗೆ ವಧೂವರರು ತುಳಿಯಬೇಕು. ತಾವು ಏಳು ಹೆಜ್ಜೆಗಳನ್ನು ಒಟ್ಟಿಗೆ ಇಟ್ಟಿದ್ದರಿಂದ ಗೆಳೆಯರಾಗಿದ್ದೇವೆ ಎಂಬುದಾಗಿ ವಧೂವರರು ಈ ಮೂಲಕ ಪರಸ್ಪರ ಮನವರಿಕೆ ಮಾಡಿಕೊಳ್ಳುತ್ತಾರೆ.

ಕೌಟುಂಬಿಕ ಸಾಮರಸ್ಯ ಎಂದಮೇಲೆ, ಅದಕ್ಕೆ ಕಾರಣವಾಗುವ ಅಂಶಗಳನ್ನು ನಾವು ಆಚರಣೆಯಲ್ಲಿ ತರಬೇಕು. ಇಲ್ಲದಿದ್ದರೆ, ಕುಟುಂಬದ ಸೌಹಾರ್ದ ಕೆಟ್ಟುಹೋಗಿ, ಆ ಮೂಲಕ ಸಮಾಜವ್ಯವಸ್ಥೆಯೂ ಶಿಥಿಲವಾಗುತ್ತದೆ. ಈ ಅಂಶವನ್ನು ರೋಚಕ ಘಟನೆಗಳು ಮತ್ತು ಸ್ನೇಹಭರಿತ ವಿವರಣೆಗಳ ಮೂಲಕ ನಮಗೆ ತಿಳಿಸಿಕೊಟ್ಟಿರುವ ಲೇಖಕರು ಕಾರ್ಕಳದವರು. ವೃತ್ತಿಯಲ್ಲಿ ವೈದ್ಯರಾದರೂ ಪ್ರವೃತ್ತಿಯಲ್ಲಿ ಸಾಹಿತ್ಯ ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ. ವ್ಯಕ್ತಿತ್ವವಿಕಸನದ ಬಗೆಗಿನ ಇವರ ಅಂಕಣ 'ಉತ್ಥಾನ' ಪತ್ರಿಕೆಯಲ್ಲಿ ಪ್ರತಿತಿಂಗಳೂ ಪ್ರಕಟವಾಗುತ್ತಿದೆ.

ನಮ್ಮ ದೇಶದಲ್ಲಿ ವಿವಾಹವನ್ನು ಸರಕಾರಿ ಕಛೇರಿಯಲ್ಲಿ ನೋಂದಾವಣಿ ಮಾಡಿಸುವುದಕ್ಕೆ ಅಷ್ಟೊಂದು ಪ್ರಾಶಸ್ತ್ಯವಿಲ್ಲ. ಬದಲಿಗೆ ಗಂಡು-ಹೆಣ್ಣು ಅಗ್ನಿಯನ್ನು ಸಾಕ್ಷಿಯಾಗಿಟ್ಟು ದಾಂಪತ್ಯ ಜೀವನಕ್ಕೆ ಕಾಲಿಡುತ್ತಾರೆ. ನಮ್ಮ ಧರ್ಮದ ಪ್ರಕಾರ ವಿವಾಹ ಎಂಬುದು ಜನ್ಮದುದ್ದಕ್ಕೂ ಒಬ್ಬರನ್ನೊಬ್ಬರು ಅರ್ಥಮಾಡಿಕೊಂಡು ಬದುಕಬೇಕಾದ ಶಾಶ್ವತವಾದ ಸಾಮಾಜಿಕ ವ್ಯವಸ್ಥೆ.

ಆದರೆ ಈಗೀಗ ಪಾಶ್ಚಾತ್ಯ ಜೀವನಶೈಲಿ ನಮ್ಮ ಕುಟುಂಬ ವ್ಯವಸ್ಥೆಯ ಮೇಲೂ ಪರಿಣಾಮ ಬೀರುತ್ತಿದೆ. ವಿವಾಹಪೂರ್ವ ಲೈಂಗಿಕತೆ, ಸಣ್ಣಪುಟ್ಟ ಕಾರಣಗಳಿಗಾಗಿ ವೈವಾಹಿಕ ವಿಚ್ಛೇದನ, ಸಲಿಂಗರತಿ, ಯಾವುದೇ ಕಟ್ಟುಪಾಡಿಲ್ಲದೆ ಸಂಗಾತಿಯೊಂದಿಗೆ ಕೂಡಿ ಬಾಳುವುದು – ಇವು ನಮ್ಮ ದೇಶದಲ್ಲೂ ನಿಧಾನವಾಗಿ ನುಸುಳುತ್ತಿವೆ. ಸರ್ವೋಚ್ಚ ನ್ಯಾಯಾಲಯವೂ ಇವಕ್ಕೆ ಅನುಮತಿಯನ್ನು ಕೊಟ್ಟು, ಇಂಥ ಸಂಗತಿಗಳು ಕಾನೂನಿನ ಪ್ರಕಾರ ಅಪರಾಧವಲ್ಲ ಎಂಬಂತಾಗಿದೆ. ೨೦೦೯ರಲ್ಲಿ ಸಮಾನಲಿಂಗ ಮದುವೆಗೆ ಕಾನೂನಿನ ಸಮ್ಮತಿ ಸಿಕ್ಕಿದ ಮೇಲೆ ಈ ದೇಶದಲ್ಲಿ ಹಾಸ್ಯದ ಮಾತೊಂದು ಪ್ರಚಲಿತದಲ್ಲಿದೆ.

ತಾಯಿ ಮಗನಿಗೆ,
೧೯೭೭ ರಲ್ಲಿ : ನಮ್ಮ ಜಾತಿಯವನನ್ನೇ ಮದುವೆಯಾಗು
೧೯೮೯ ರಲ್ಲಿ : ನಮ್ಮ ಧರ್ಮದವನನ್ನೇ ಮದುವೆಯಾಗು
೧೯೯೯ ರಲ್ಲಿ : ನಮ್ಮ ಅಂತಸ್ತಿನವನನ್ನೇ ಮದುವೆಯಾಗು
೨೦೦೯ ರಲ್ಲಿ : ಹುಡುಗಿಯನ್ನೇ ಮದುವೆಯಾಗು

ಎಂಥ ಶೋಚನೀಯ ಪರಿಸ್ಥಿತಿಗೆ ನಾವು ಬಂದುಬಿಟ್ಟಿದ್ದೇವೆ!

ಒಂದು ಕುಟುಂಬ ಅಂದ ಮೇಲೆ ಅಲ್ಲಿ ವಿಭಿನ್ನ ಸ್ವಭಾವದ, ವಿರುದ್ಧ ಅಭಿರುಚಿಯ ವ್ಯಕ್ತಿಗಳಿರುತ್ತಾರೆ. ಅವರಲ್ಲಿ ಪರಸ್ಪರ ಸಾಮರಸ್ಯವಿದ್ದರೆ ಮಾತ್ರ ಸಂಸಾರ ಸಾರವತ್ತಾಗಿರುತ್ತದೆ. ಶಿವನ ಸಂಸಾರವನ್ನೇ ನೋಡಿ. ಅವನ ವಾಹನವಾಗಿ ಕೆಳಗಡೆ ನಂದಿಯಿದೆ. ಪಕ್ಕದಲ್ಲಿಯೇ ಪಾರ್ವತಿಯ ವಾಹನವಾದ ಸಿಂಹವಿದೆ. ಶಿವನ ಕೊರಳಲ್ಲಿ ಹಾವಿದೆ. ಒಂದು ಬದಿಯಲ್ಲಿ ಗಣಪತಿಯ ವಾಹನವಾಗಿ ಇಲಿಯಿದೆ. ಇನ್ನೊಂದು ಬದಿಯಲ್ಲಿ ಸುಬ್ರಹ್ಮಣ್ಯನ ವಾಹನವಾಗಿ ನವಿಲಿದೆ. ನಂದಿಯನ್ನು ಕೊಂದು ತಿಂದು ಬದುಕುವ ಸಿಂಹ, ಇಲಿಯನ್ನು ಕೊಂದು ತಿಂದು ಬದುಕುವ ಹಾವು, ಹಾವನ್ನು ಕೊಂದು ತಿಂದು ಬದುಕುವ ನವಿಲು – ಎಲ್ಲವೂ ಒಂದೇ ಕಡೆ ಇವೆ. ಹೀಗೆ ಪರಸ್ಪರ ವಿರುದ್ಧ ಸ್ವಭಾವದ ಪ್ರಾಣಿಗಳೆಲ್ಲವೂ ಶಿವನ ಸಂಸಾರದಲ್ಲಿ ಸಮರಸದಿಂದ ಬದುಕುತ್ತಿವೆ. ಅದೇ ರೀತಿ ನಮ್ಮ ಕುಟುಂಬದಲ್ಲೂ ಪರಸ್ಪರ ವಿರುದ್ಧ ಸ್ವಭಾವದ ವ್ಯಕ್ತಿಗಳಿದ್ದರೂ ನಾವು ಸಾಮರಸ್ಯದಿಂದ ಬದುಕಬೇಕು ಎಂಬುದಾಗಿ ಶಿವನ ಸಂಸಾರದ ಕಲ್ಪನೆಯು ಸಂದೇಶವನ್ನು ನೀಡುತ್ತದೆ.

ಕುಟುಂಬದಲ್ಲಿ ಸಾಮರಸ್ಯ ಸಾಧಿಸಬೇಕಾದರೆ ತುಂಬಾ ಸಹನೆ ಬೇಕು. ಸಹನೆಯಿಲ್ಲದಿದ್ದರೆ ಸಾಮರಸ್ಯ ಸಾಧ್ಯವೇ ಇಲ್ಲ. ಮಾತಿಗೆ ಮಾತು, ಸೇಡಿಗೆ ಸೇಡು, ಸೇರಿಗೆ ಸವ್ವಾಸೇರು ಎಂಬುದು ಸಾಮರಸ್ಯ ಕುಟುಂಬದ ಲಕ್ಷಣಗಳಲ್ಲ. ಕುಟುಂಬದ ಸದಸ್ಯನೊಬ್ಬನಿಗೆ ಆಕಸ್ಮಿಕವಾಗಿ ಕೋಪ ಬಂದರೆ ಉಳಿದವರು ಸಹನೆಯಿಂದಿದ್ದರೆ ಅಲ್ಲಿ ಸಂಘರ್ಷ ಏರ್ಪಡುವುದಿಲ್ಲ. ಸಹನೆಯಿಂದಲೇ ಎಲ್ಲರ ಹೃದಯವನ್ನೂ ಗೆಲ್ಲಬಹುದು.

ಹಿಂದೆ ಜಪಾನ್ ದೇಶದಲ್ಲಿ ಓ-ಚೋ-ಸಾನ್ ಎಂಬ ಸಭ್ಯ ಗೃಹಸ್ಥನಿದ್ದ. ಅವನ ಕುಟುಂಬದಲ್ಲಿ ನೂರಕ್ಕಿಂತಲೂ ಹೆಚ್ಚು ಸದಸ್ಯರಿದ್ದು, ಎಲ್ಲರೂ ಪ್ರೇಮ, ಸೌಹಾರ್ದತೆಗಳಿಂದ ಒಟ್ಟಾಗಿ ಜೀವನ ಸಾಗಿಸುತ್ತಿದ್ದರು. ಒಟ್ಟಾಗಿ ಬದುಕುವ, ಒಂದಾಗಿ ಉಣ್ಣುವ, ಒಮ್ಮನಸ್ಸಿನ ವ್ಯವಹಾರದಿಂದ ನಡೆಯುವ ಆ ಕುಟುಂಬದ ಸಮಾಚಾರ ಅಲ್ಲಿನ ಸಾಮ್ರಾಟನ ಕಿವಿಗೂ ಬಿತ್ತು. ಸಾಮ್ರಾಟನೇ ಒಮ್ಮೆ ಈ ಕುಟುಂಬದ ಪರೀಕ್ಷೆ ಮಾಡಲೆಂದು ಮಂತ್ರಿಯ ಜೊತೆಗೆ ಬಂದ.

ಸ್ವಾಗತ, ಆದರ, ಸತ್ಕಾರಗಳೆಲ್ಲ ಮುಗಿದ ಬಳಿಕ ಸಾಮ್ರಾಟ ಕೇಳಿದ, "ಸ್ವಾಮಿ, ನಿಮ್ಮ ಕುಟುಂಬದಲ್ಲಿ ನೂರಕ್ಕಿಂತಲೂ ಹೆಚ್ಚು ಜನರಿದ್ದರೂ ಪ್ರೀತಿ, ಸೌಹಾರ್ದ, ಒಗ್ಗಟ್ಟಿನ ಜೀವನ ನಡೆಯುತ್ತಿದೆ ಎಂದು ಕೇಳಿದ್ದೇವೆ. ಅದರ ಒಳಗುಟ್ಟೇನು ಎಂದು ತಿಳಿಯಲಿಕ್ಕಾಗಿ ನಾವು ಬಂದಿದ್ದೇವೆ."

ಓ–ಚೋ–ಸಾನ್ ಮುದುಕನಾಗಿದ್ದ. ಹೆಚ್ಚು ಹೊತ್ತು ಮಾತನಾಡಲು ಅಸಮರ್ಥನಾಗಿದ್ದ. ಆತ ತನ್ನ ಮೊಮ್ಮಗನ ಕೈಯಲ್ಲಿ ಒಂದು ಕಾಗದ ಮತ್ತು ಲೇಖನಿ ತರಿಸಿ, ನಡುಗುವ ಕೈಯಿಂದ ನೂರು ಶಬ್ದಗಳನ್ನು ಬರೆದ. ಅದರ ಮೇಲೆ, ಸಾಮ್ರಾಟನು ಕಣ್ಣಾಡಿಸಿದ. ಅಲ್ಲಿ ಸಹನೆ–ಸಹನೆ–ಸಹನೆ ಎಂದು ನೂರು ಸಾರಿ ಬರೆಯಲಾಗಿತ್ತು. ಸಾಮ್ರಾಟನು ಚಕಿತನಾಗಿ ಆ ಮುದುಕನೆಡೆಗೆ ದೃಷ್ಟಿ ಹಾಯಿಸಿದ. ಆತ ನಡುಗುವ ಸ್ವರದಲ್ಲಿ ಉತ್ತರಿಸಿದ: "ಮಹಾಪ್ರಭು, ನನ್ನ ಕುಟುಂಬದ ಒಗ್ಗಟ್ಟು, ಪ್ರೇಮ ಮತ್ತು ಸೌಹಾರ್ದಗಳ ಮೂಲಮಂತ್ರ ಇದೇ ಆಗಿದೆ. ಸಹನಶೀಲತೆಯೇ ನಮ್ಮ ಒಳಗುಟ್ಟಾಗಿದೆ. 'ಸಹನೆ' ಎಂಬ ಮಹಾಮಂತ್ರವೇ ನಮ್ಮೆಲ್ಲರನ್ನೂ ಏಕತೆಯಲ್ಲಿ ಬೆಸೆಯುವ ಸೂತ್ರವಾಗಿದೆ." ಇದರಿಂದ ಸಾಮ್ರಾಟನಿಗೆ ಬಹಳ ಸಂತೋಷವಾಯಿತು. ಆತನನ್ನು ಅಭಿನಂದಿಸಿ, ಮಂತ್ರಿಯೊಂದಿಗೆ ಅರಮನೆಯತ್ತ ತೆರಳಿದ.

ಕುಟುಂಬ ಅಂದರೆ ಪರಸ್ಪರ ಭಿನ್ನಾಭಿಪ್ರಾಯಗಳನ್ನು ಒಪ್ಪಿಕೊಂಡು ಬಾಳುವುದು. ನಮ್ಮ ವ್ಯಕ್ತಿತ್ವವನ್ನು ಉಳಿಸಿಕೊಂಡು ಇನ್ನೊಬ್ಬರ ವ್ಯಕ್ತಿತ್ವವನ್ನು ಗೌರವಿಸುವುದೇ ಸುಖೀಸಂಸಾರದ ಮಾರ್ಗ. ತನ್ನ ಅಭಿರುಚಿ, ಹವ್ಯಾಸಗಳನ್ನು ಬಲಿಕೊಡದೆ, ಇತರರ ಅಭಿರುಚಿ, ಹವ್ಯಾಸಗಳಿಗೆ ಅಡ್ಡಿ ಬರದೆ, ಅವನ್ನು ಆದರಿಸಬೇಕು. ತನ್ನ ಅಭಿಪ್ರಾಯವನ್ನು ಇನ್ನೊಬ್ಬರ ಮೇಲೆ ಹೇರುವುದರಲ್ಲಿ ಸಂಸಾರದ ಸುಖ ಇಲ್ಲ. ಬದಲಿಗೆ ಇನ್ನೊಬ್ಬರ ಅಭಿಪ್ರಾಯವನ್ನು ಆಲಿಸಿ, ಅರ್ಥ ಮಾಡಿಕೊಳ್ಳುವುದರಲ್ಲಿ ಸಂಸಾರದ ನೆಮ್ಮದಿ ಇದೆ.

ಸಮಾಜದಲ್ಲಿ ಯಾವೊಬ್ಬ ಮನುಷ್ಯನೂ ಏಕಾಂಗಿಯಾಗಿ ಬದುಕಲು ಆಗುವುದಿಲ್ಲ. ಮನುಷ್ಯ ಸಂಘಜೀವಿ. ಅವನಿಗೆ ಸಂಗಾತಿಗಳು ಇರುವುದು ಅನಿವಾರ್ಯ. ಆತನ ಸುಖದುಃಖಗಳನ್ನು, ನೋವು ನಲಿವುಗಳನ್ನು ಹಂಚಿಕೊಳ್ಳಲು ಅವನಿಗೆ ಒಬ್ಬ ಸಂಗಾತಿ ಬೇಕೇ ಬೇಕು. ಅವುಗಳನ್ನು ಯಾರೊಂದಿಗೂ ಹಂಚಿಕೊಳ್ಳದೆ, ತನ್ನಲ್ಲಿಯೇ ಅದುಮಿಟ್ಟರೆ ಅವನೊಬ್ಬ ಮಾನಸಿಕ ರೋಗಿಯಾಗುವ ಸಾಧ್ಯತೆ ಇದೆ. ಅಲ್ಲದೆ ಅವನಲ್ಲಿ ಖಿನ್ನತೆ, ಉದ್ವೇಗ, ಹತಾಶೆ ಮುಂತಾದ ಮಾನಸಿಕ ರೋಗಗಳು ಉತ್ಪನ್ನವಾಗುವ ಸಂಭವವೂ ಇದೆ. ಆದ್ದರಿಂದ ತನ್ನ ತುಮುಲಗಳನ್ನು ಹಂಚಿಕೊಳ್ಳಲು ಪ್ರತಿಯೊಬ್ಬರಿಗೂ ಆತ್ಮೀಯರ ಆವಶ್ಯಕತೆ ಇದೆ. ಇದಕ್ಕೆ ಉತ್ತಮ ವೇದಿಕೆಯೇ ಕುಟುಂಬ ಎಂಬ ವ್ಯವಸ್ಥೆ. ಇಲ್ಲಿ ತಮ್ಮ ದುಃಖಗಳನ್ನು ತೋಡಿಕೊಳ್ಳಲು, ನೋವನ್ನು ನಿವಾರಿಸಲು ಸಂಗಾತಿಗಳು ಇರುತ್ತಾರೆ. ಗಂಡ–ಹೆಂಡತಿಯರಲ್ಲಿ ಪರಸ್ಪರ ಪ್ರೀತಿ, ವಿಶ್ವಾಸ ಇದ್ದರೆ ಎಂತಹ ಕಷ್ಟಗಳನ್ನಾದರೂ ನಿವಾರಿಸಿಕೊಳ್ಳುವ ಧೈರ್ಯ ಬರುತ್ತದೆ. ಹಾಗೆಯೇ ಮಕ್ಕಳಿಗೆ ರಕ್ಷಣೆಯ ಭಾವನೆ ಕುಟುಂಬದಿಂದ ಬರುತ್ತದೆ. ತಮಗೆ ಎಂಥ ಘೋರವಾದ ಸಮಸ್ಯೆ ಬಂದರೂ ಅದನ್ನು ನಿವಾರಿಸಲು ತಂದೆತಾಯಿಯರಿದ್ದಾರೆ ಎಂಬ ಸುರಕ್ಷಿತ ಭಾವನೆ ಅವರಲ್ಲಿರುತ್ತದೆ. ಕುಟುಂಬವ್ಯವಸ್ಥೆಯಲ್ಲಿ ಬೆಳೆಯದ ಮಕ್ಕಳನ್ನು ಅನಾಥಪ್ರಜ್ಞೆ ಕಾಡುತ್ತದೆ. ಅವರು ಮುಂದೆ ಸಮಾಜಕಂಟಕರಾಗಿ ಬೆಳೆಯುವ ಅಪಾಯ ಇರುತ್ತದೆ. ಆದ್ದರಿಂದ ಕುಟುಂಬವ್ಯವಸ್ಥೆ ಕೇವಲ ಸುಂದರ ವೈಯಕ್ತಿಕ ಬದುಕಿಗಾಗಿ ಮಾತ್ರ ಅಲ್ಲ, ಸ್ವಸ್ಥ, ಸಮೃದ್ಧ ಸಮಾಜದ ನಿರ್ಮಾಣಕ್ಕೂ ಅನಿವಾರ್ಯವಾಗಿದೆ.

ಮನುಷ್ಯನು ಕುಟುಂಬ ಬಿಟ್ಟು, ಒಬ್ಬಂಟಿಗನಾಗಿ ಬದುಕುವುದು ಕಷ್ಟ ಮನುಷ್ಯ ಏಕಾಂತದಲ್ಲಿ ಬದುಕಬಹುದು. ಆದರೆ ಒಬ್ಬಂಟಿಗನಾಗಲ್ಲ. ಒಂಟಿತನದಲ್ಲಿ ಯಾತನೆಯಿದೆ, ಏಕಾಂತದಲ್ಲಿ ಆನಂದವಿದೆ. ಒಂಟಿತನದಲ್ಲಿ ವ್ಯಕ್ತಿಯು ಅತಂತ್ರನಾಗಿದ್ದರೆ, ಏಕಾಂತದಲ್ಲಿ ಸ್ವತಂತ್ರನಾಗಿರುತ್ತಾನೆ. ಒಂಟಿತನದಲ್ಲಿ ವಿವಾದವಿದ್ದರೆ, ಏಕಾಂತದಲ್ಲಿ ಸಂವಾದವಿರುತ್ತದೆ. ಒಂಟಿತನದಲ್ಲಿ ಸ್ನೇಹಕ್ಕಾಗಿ ಹಪಹಪಿಸುವ ತೀರದ ಬಯಕೆ ಇರುತ್ತದೆ. ಏಕಾಂತವು ನಿರ್ವಾತಪ್ರದೇಶದಲ್ಲಿರುವ ದೀಪದ ಶಿಖೆಯಂತೆ. ಏಕಾಂತದಲ್ಲಿ ಮೌನದ ಶಾಂತತೆಯಿದೆ. ಅಲ್ಲಿ ನಮ್ಮನ್ನು ನಾವು ಪರೀಕ್ಷಿಸಿಕೊಳ್ಳಬಹುದು. ಅದುವೇ ಧ್ಯಾನ ಎಂದೆನಿಸುತ್ತದೆ. ಒಂಟಿತನ ಎಂದಿಗೂ ಏಕಾಂತವಾಗಲು ಸಾಧ್ಯವಿಲ್ಲ. ಒಂಟಿತನ ನಿಷೇಧಾರ್ಥಕ ಸ್ಥಿತಿ; ಈ ಸ್ಥಿತಿ ಅತ್ಯಂತ ದುಃಖದ ಮತ್ತು ಖಾಲಿತನದ ಸ್ಥಿತಿ. ಒಂಟಿತನ ಭೌತಿಕ ಒಬ್ಬಂಟಿತನದ ಸ್ಥಿತಿ. ಏಕಾಂಗಿಯ ಏಕಾಂತತೆ ಆಧ್ಯಾತ್ಮಿಕ ಸ್ಥಿತಿ. ಒಂಟಿತನ ಒಂದು ವಿಷಮಸ್ಥಿತಿ, ಏಕಾಂತ ಸಮತ್ವದ ಸ್ಥಿತಿ.

ಒಂಟಿತನ ಅನಾರೋಗ್ಯದ ಲಕ್ಷಣ. ಈ ಅನಾರೋಗ್ಯಕ್ಕೆ ಕುಟುಂಬವ್ಯವಸ್ಥೆಯೇ ಔಷಧಿ. ಕುಟುಂಬದಲ್ಲಿದ್ದೂ ಏಕಾಂತದಲ್ಲಿರಬಹುದು, ಏಕಾಂತದ ಸಾಧನೆ ಮಾಡಬಹುದು. ಆದರೆ ಒಂಟಿತನದಲ್ಲಿ ಮಾನಸಿಕ ಕ್ಲೇಶಗಳು ಸಾಧನೆಗೆ ಅಡ್ಡಿಬರುತ್ತವೆ. ಕೌಟುಂಬಿಕ ಜೀವನದಿಂದ ಒಂಟಿತನದ ಮಾನಸಿಕ ಕ್ಲೇಶಗಳನ್ನು ದೂರಗೊಳಿಸಬಹುದು. ಮನುಷ್ಯ ಒಂಟಿತನದ ಖಾಲಿತನವನ್ನು ಕಳೆದುಕೊಂಡರೆ ಆತ ಸಮಾಜಕ್ಕೆ ಆಸ್ತಿಯಾಗಬಲ್ಲ, ಉತ್ತಮ ನಾಗರಿಕನಾಗಬಲ್ಲ. ಇಲ್ಲದಿದ್ದರೆ ಆತ ಸಮಾಜಕ್ಕೆ ಮಾರಕನಾಗಬಲ್ಲ. ಇದಕ್ಕೊಂದು ಉದಾಹರಣೆ ಅಂದರೆ ಹಿಟ್ಲರ್.

ಹಿಟ್ಲರ್ ಯಾವಾಗಲೂ ಒಬ್ಬಂಟಿಗನಾಗಿ ಬದುಕುತ್ತಿದ್ದ. ಆತನಿಗೆ ಆತ್ಮೀಯರೆಂಬುವವರು ಯಾರೂ ಇರಲಿಲ್ಲ. ಆತನಿಗೆ ಯಾರ ಮೇಲೂ ವಿಶ್ವಾಸ ಇರಲಿಲ್ಲ. ಆತ ಯಾರನ್ನೂ ನಂಬುತ್ತಿರಲಿಲ್ಲ. ಎಲ್ಲ ವ್ಯಕ್ತಿಗಳೊಂದಿಗೆ ಆತ ಒಂದು ಅಂತರವನ್ನು, ಒಂದು ದೂರವನ್ನು ಸದಾ ಕಾಪಾಡಿಕೊಂಡು ಬರುತ್ತಿದ್ದ. ಆತ ನೋಡಲು ಮಾತ್ರ ಎದೆಗಾರನಂತೆ ಇರುತ್ತಿದ್ದ. ಇಂಥವರು ತೋರುವ ಧೈರ್ಯ ಬರಿಯ ಬೂಟಾಟಿಕೆ. ಎಲ್ಲವೂ ತೋರಿಕೆಯ ಎದೆಗಾರಿಕೆ. ಅಂತರಂಗದಲ್ಲಿ ಭಯವೆಂಬ ಪಿಶಾಚಿ ಅವರನ್ನು ಹಿಡಿದಿರುತ್ತದೆ. ಹಿಟ್ಲರ್ ಎಷ್ಟು ಹೆದರಿದ್ದ ಅಂದರೆ, ತನ್ನನ್ನು ಪ್ರೀತಿಸುವ ಪ್ರೇಯಸಿಯನ್ನು ಮದುವೆ ಕೂಡ ಆಗಿರಲಿಲ್ಲ.  ಸಾಯುವುದು ಖಾತರಿಯಾದಾಗ, ಸಾಯುವ ಎರಡು ಗಂಟೆ ಮೊದಲು ಮಾತ್ರ ಆತ ಮದುವೆಯಾದ.  ಹೀಗೆ ಕುಟುಂಬಜೀವನದ ಪ್ರೀತಿ, ವಿಶ್ವಾಸ, ಭದ್ರತೆಯ ಅಭಾವದಿಂದ ಹಿಟ್ಲರ್ ಒಬ್ಬ ರಾಕ್ಷಸನಾಗಿ ಬೆಳೆದ. ೬೦ ಲಕ್ಷ ಯಹೂದಿಗಳನ್ನು ವಿನಾಕಾರಣ ಗ್ಯಾಸ್ ಚೇಂಬರ್‌ನಲ್ಲಿ ನಿರ್ದಯವಾಗಿ ಉಸಿರುಗಟ್ಟಿಸಿ ಕೊಂದ. ಕುಟುಂಬ ಜೀವನದ ಅಭಾವದ ಪರಿಣಾಮ ಇದು.  ಕುಟುಂಬದ ಪ್ರೀತಿ, ವಿಶ್ವಾಸ ಎಂಬ ಅಮೃತ ಸಾಗರದಲ್ಲಿ ಮುಳುಗಿದವನಿಗೆ ತೃಪ್ತಿ, ಶಾಂತಿ, ಅನುಕಂಪ, ಔದಾರ್ಯ ಮುಂತಾದ ಮುತ್ತು ರತ್ನಗಳು ಸಿಗುವುದರಲ್ಲಿ ಯಾವುದೇ ಸಂಶಯವಿಲ್ಲ.  ಆದ್ದರಿಂದ ಸಾಮರಸ್ಯದಿಂದ ಇರುವ ಸುಖೀಕುಟುಂಬದಿಂದ ಮಾತ್ರವೇ ಸಮಾಜದಲ್ಲಿ ಶಾಂತಿ, ನೆಮ್ಮದಿ ನೆಲೆಸುತ್ತದೆ ಎಂಬುದರಲ್ಲಿ ಎರಡು ಮಾತಿಲ್ಲ.

ಕುಟುಂಬದ ಸದಸ್ಯರೆಲ್ಲರೂ ಆಗಾಗ ಒಟ್ಟಿಗೆ ಕಲೆತು ಸಮಯವನ್ನು ಕಳೆಯುವುದರಲ್ಲಿ ಕುಟುಂಬದ ಹಿತ ಅಡಗಿದೆ. ನಿಗದಿತ ಸಮಯಕ್ಕೆ ಸರಿಯಾಗಿ ಎಲ್ಲರೂ ಒಟ್ಟಿಗೆ ಕುಳಿತು, ಊಟ ಮಾಡಿದರೆ ಕುಟುಂಬದವರ ಸಮಸ್ಯೆಗಳನ್ನು ಬಿಚ್ಚುಮನಸ್ಸಿನಿಂದ ಚರ್ಚಿಸಬಹುದು. ಇದರಿಂದ ಪರಸ್ಪರ ಭಿನ್ನಾಭಿಪ್ರಾಯ ಕಳೆದು ಸಾಮರಸ್ಯ ಉಂಟಾಗುತ್ತದೆ. ಬಹುತೇಕ  ಸಮಸ್ಯೆಗಳು ಪರಸ್ಪರ ಸಂವಹನದ ಕೊರತೆಯಿಂದ ನಿರ್ಮಾಣವಾಗುತ್ತವೆ. ಮನೆಯ ಮಕ್ಕಳೊಂದಿಗೆ ಹಿರಿಯರು ಸಾಕಷ್ಟು ಸಮಯವನ್ನು ಕಳೆಯಬೇಕು. ಮನೆಯ ಯಜಮಾನ ಕುಟುಂಬಕ್ಕೆ ಕೊಡಬಹುದಾದ ಅತ್ಯುತ್ತಮ ಉಡುಗೊರೆ ಅಂದರೆ ಮನೆಯವರ ಜೊತೆಗೆ ಕಳೆಯುವ ಸಮಯ.

ಅದೊಂದು ಸರಕಾರಿ ಶಾಲೆ. ಅಲ್ಲಿನ ಶಿಕ್ಷಕಿ ತುಂಬಾ ಶ್ರದ್ಧೆಯಿಂದ ಕೆಲಸ ಮಾಡುವವರು. ಪ್ರತಿ ತಿಂಗಳೂ ಪೋಷಕರೊಂದಿಗೆ ಸಭೆ ನಡೆಸಿ, ಮಕ್ಕಳ ಓದು, ಅಂಕಗಳು, ಹವ್ಯಾಸಗಳ ಬಗ್ಗೆ ಚರ್ಚಿಸುತ್ತಿದ್ದರು. ಒಂದು ಮಗುವಿನ ತಂದೆ ಎಂದೂ ಈ ಸಭೆಗಳಿಗೆ ಬಂದವರಲ್ಲ. ತಾಯಿ ಮಾತ್ರ ಬರುತ್ತಿದ್ದರು. ಒಮ್ಮೆ ಶಿಕ್ಷಕಿ ತಂದೆಯನ್ನು ಕರೆದುಕೊಂಡು ಬರಲೇಬೇಕೆಂದು ಹೇಳಿ ಆ ಮಗುವಿಗೆ ತಾಕೀತು ಮಾಡಿದರು. ತಂದೆ ಒಲ್ಲದ ಮನಸ್ಸಿನಿಂದಲೇ ಬಂದು, "ಏನು ಹೇಳಿ, ಮೇಡಂ. ನನಗೆ ತುಂಬಾ ಕೆಲಸವಿರುತ್ತದೆ. ಒಂದು ನಿಮಿಷವೂ ಪುರುಸೊತ್ತಿಲ್ಲ. ನೀವು ಬರಲೇಬೇಕೆಂದು ಕಡ್ಡಾಯ ಮಾಡಿದ್ದರಿಂದ ಇಂದು ಬಂದಿದ್ದೇನೆ, ಏನು ಹೇಳಿ?" ಎಂದು ಅವಸರ ಮಾಡಿದರು. ಶಿಕ್ಷಕಿ ಏನೂ ಮಾತನಾಡದೆ, ಮಕ್ಕಳು ಬರೆದಿದ್ದ ಚಿತ್ರಗಳನ್ನು ಹುಡುಕಿ, ಆತನ ಮಗು ಬರೆದಿದ್ದ ಚಿತ್ರವನ್ನು ತೆಗೆದು ಆತನ ಕೈಗಿತ್ತರು. ಚಿತ್ರದ ಶೀರ್ಷಿಕೆ, 'ನನ್ನ ಮನೆ ಮತ್ತು ಮನೆಯಲ್ಲಿರುವವರು' ಎಂದಾಗಿತ್ತು. ಆ ತಂದೆ ಚಿತ್ರವನ್ನು ನೋಡಿದರು. ಮಗು ತನ್ನ ಕೈಯಿಂದಲೇ ಅಂಕುಡೊಂಕಾಗಿ ಗೆರೆಗಳ ಮೂಲಕ ಚಿತ್ರ ಬಿಡಿಸಿತ್ತು. ಚಿತ್ರದಲ್ಲಿ ತಾಯಿ, ಅಣ್ಣ, ಅಜ್ಜಿ ಮತ್ತು ನಾಯಿಮರಿ ಮುಂತಾದ್ದನ್ನೆಲ್ಲ ಚಿತ್ರಿಸಲಾಗಿತ್ತು. ಸ್ವಲ್ಪ ಹೊತ್ತು ಚಿತ್ರವನ್ನೇ ದಿಟ್ಟಿಸಿ ನೋಡಿದ ತಂದೆ, "ಇದರಲ್ಲಿ ಎಲ್ಲರೂ ಇದ್ದಾರೆ. ಆದರೆ ನನ್ನ ಮಗಳು ನನ್ನನ್ನೇ ಬಿಟ್ಟಿದ್ದಾಳಲ್ಲ!" ಎಂದು ಕೇಳಿದರು. ಅದಕ್ಕೆ ಶಿಕ್ಷಕಿ ಹೀಗೆ ಉತ್ತರವಿತ್ತರು: "ನಾನು ಇದೇ ಪ್ರಶ್ನೆಯನ್ನು ನಿಮ್ಮ ಮಗಳಿಗೆ ಕೇಳಿದೆ! ಆಕೆ, 'ನೀವು ಮನೆಯಲ್ಲಿರುವವರ ಚಿತ್ರ ಬರೆಯಿರಿ ಎಂದು ಹೇಳಿದಿರಿ. ನಮ್ಮ ತಂದೆ ಯಾವಾಗಲೂ ಮನೆಯಲ್ಲಿ ಇರುವುದೇ ಇಲ್ಲ. ಆದ್ದರಿಂದ ನಾನು ಅವರ ಚಿತ್ರ ಬರೆದಿಲ್ಲ' ಎಂದು ಹೇಳಿದಳು. ಬಹುಶಃ ನೀವು ಮನೆಯಲ್ಲಿ ಹೆಚ್ಚಿರುವುದಿಲ್ಲ.  ಆದ್ದರಿಂದ ನಿಮ್ಮ ಮಗಳ ಚಿತ್ರದಲ್ಲಿ ನೀವಿಲ್ಲ."

ಈ ಮಾತು ಕೇಳಿ ಆ ತಂದೆಗೆ ತೀವ್ರ ಆಘಾತವಾಯಿತು. ಕರುಳೇ ಕಿತ್ತು ಬಂದಂತಾಯಿತು. "ನನ್ನ ಕೆಲಸ, ಸಂಪಾದನೆಗಳೇ ಹೆಚ್ಚೆಂದುಕೊಂಡಿದ್ದ ನಾನು ಮನೆಯಲ್ಲಿ ಹೆಚ್ಚು ಸಮಯ ಇರುತ್ತಿರಲಿಲ್ಲ. ಆದರೆ ನನ್ನ ಮಗಳು ನಾನು ಮನೆಯವನೇ ಅಲ್ಲ ಎಂದುಕೊಳ್ಳುವಷ್ಟು ಮನೆಯಿಂದ ಹೊರಗಿರುತ್ತೇನೆಂದು ಇಂದು ನನಗೆ ಗೊತ್ತಾಯಿತು. ಇನ್ನು ಮುಂದೆ ನನ್ನ ವರ್ತನೆಯನ್ನು ಬದಲಿಸಿಕೊಳ್ಳುತ್ತೇನೆ.  ಕುಟುಂಬಕ್ಕೆ ಹೆಚ್ಚು ಸಮಯ ಕೊಡಲು ಪ್ರಯತ್ನಿಸುತ್ತೇನೆ" ಎಂದು ಶಿಕ್ಷಕಿಗೆ ಆಶ್ವಾಸನೆ ಕೊಟ್ಟು, ಅವರು ಹೊರಟು ಹೋದರು. ಅದರಂತೆಯೇ ನಡೆದುಕೊಂಡರು.  ಅದರ